# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರ.

ಉಪಸ್ಥಿತರುಃ- **ಶ್ರೀ ವೈ. ಕೆ. ಬೇನಾಳ**, ಬಿ.ಎ., ಎಲ್.ಎಲ್.ಬಿ., (ಆನರ್ಸ),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹಿರೇಕೆರೂರ.

ದಿನಾಂಕ 24 ನೇ ಆಗಸ್ಟ 2021

**ಆರ್.ಎ. ಸಂಖ್ಯೆಃ 35/2020**

ಮೇಲ್ಮನವಿದಾರಃ-

ಶ್ರೀ ಗಂಗನಗೌಡ ಲಕ್ಕನಗೌಡರ.

ವಿರುದ್ಧ

ಎದುರುದಾರರುಃ-

ಶ್ರೀಮತಿ ಸುಶೀಲಮ್ಮ ಮತ್ತು ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-6**

ಅರ್ಜಿದಾರ / ಮೇಲ್ಮನವಿದಾರಃ-

ಶ್ರೀ ಗಂಗನಗೌಡ ಲಕ್ಕನಗೌಡರ
ತಂದೆ ಲೇಟ್ ವೀರಹನುಮಂತಗೌಡ,
ವಯಸ್ಸು ಸುಮಾರುಃ 64 ವರ್ಷ, ಸಾಃ ಕಡೂರ ಗ್ರಾಮ,
ತಾಃ ರಟ್ಟಿಹಳ್ಳಿ (ಹಳೇ ಹಿರೇಕೆರೂರು)
ಜಿಃ ಹಾವೇರಿ.

(ಅರ್ಜಿದಾರ/ಮೇಲ್ಮನವಿದಾರನ ಪರ ವಕೀಲರು-
ಶ್ರೀ ಹೆಚ್.ಎಂ.ಸೊರಟೂರ)

-:: ವಿರುದ್ಧ ::-

<u>ಎದುರುದಾರರುಃ-</u>

1. ಶ್ರೀಮತಿ ಸುಶೀಲಮ್ಮ ಕೋಂ ಸಿದ್ದಪ್ಪ ಲಕ್ಕನಗೌಡರ,
ವಯಸ್ಸು ಸುಮಾರು 77 ವರ್ಷ,

2. ಶ್ರೀಮತಿ ಅನಸೂಯ ಕೋಂ ಶ್ರೀ ಹೊನ್ನಪ್ಪ ಕರೂರ,
ವಯಸ್ಸು ಸುಮಾರು 54 ವರ್ಷ, ಸಾಃ ಹರಿಹರ ಪಟ್ಟಣ,
ತಾಃ ಹರಿಹರ, ಜಿಃ ದಾವಣಗೆರೆ.

3. ಶ್ರೀ ಶಿವನಂದಪ್ಪಗೌಡ ಲಕ್ಕನಗೌಡರ ತಂದೆ ಲೇಟ್
ವೀರಹನುಮಂತಗೌಡ, ವಯಸ್ಸು ಸುಮಾರು 68 ವರ್ಷ,

4. ಶ್ರೀ ಅಡಿವೆಪ್ಪಗೌಡ ಲಕ್ಕನಗೌಡರ ತಂದೆ ಲೇಟ್
ವೀರಹನುಮಂತಗೌಡ, ವಯಸ್ಸು ಸುಮಾರು 62 ವರ್ಷ,
ಸಾಃ ಹೊಸಬೀರೆಶ್ವರ ನಗರ, 1 ನೇ ಕ್ರಾಸ್, ಕೆಇಬಿ ಗ್ರೀಡ್,
ಹಲಗೇರಿ ರೋಡ್ ಹತ್ತಿರ, ರಾಣೇಬೆನ್ನೂರ ಪಟ್ಟಣ,
ತಾಃ ರಾಣೇಬೆನ್ನೂರ, ಜಿಃ ಹಾವೇರಿ.

5. ಶ್ರೀ ಚಂದ್ರಶೇಖರಗೌಡ ಲಕ್ಕನಗೌಡರ
ದತ್ತಕ ತಂದೆ ಲೇಟ್ ಸಿದ್ದನಗೌಡ ಲಕ್ಕನಗೌಡರ,
ವಯಸ್ಸು ಸುಮಾರು 66 ವರ್ಷ,

6. ಶ್ರೀಮತಿ ಸುಶೀಲಮ್ಮ ತಂದೆ ಲೇಟ್ ವೀರಹನುಮಂತಗೌಡ,
ಕೋಂ ಸಿದ್ದಲಿಂಗಪ್ಪ ಶಿರಗಂಬಿ, ವಯಸ್ಸು ಸುಮಾರು 72 ವರ್ಷ,

7. ಶ್ರೀಮತಿ ನಿಂಗಮ್ಮ ತಂದೆ ಲೇಟ್ ವೀರಹನುಮಂತಗೌಡ,
ಕೋಂ ಗುರುಶಾಂತಪ್ಪ ಆಣೂರ, ವಯಸ್ಸು ಸುಮಾರು 70 ವರ್ಷ,
ಸಾಃ ಜೋಯಿಸರಹರಳಳ್ಳಿ ಗ್ರಾಮ, ತಾಃ ರಾಣೇಬೆನ್ನೂರು,
ಜಿಃ ಹಾವೇರಿ.

8. ಶ್ರೀಮತಿ ಶಾಂತಮ್ಮ ತಂದೆ ಲೇಟ್ ವೀರಹನುಮಂತಗೌಡ,
ಕೋಂ ಬಸವರಾಜ ಬನ್ನಿಹಟ್ಟಿ, ವಯಸ್ಸು ಸುಮಾರು 55 ವರ್ಷ,

ಸಾಃ ಕುಂಚೂರು ಗ್ರಾಮ, ತಾಃ ರಟ್ಟಿಹಳ್ಳಿ (ಹಳೇ ಹಿರೇಕೆರೂರು)
ಜಿಃ ಹಾವೇರಿ.

9. ಶ್ರೀ ಶಿವನಗೌಡ ಲಕ್ಕನಗೌಡರ ತಂದೆ ಲೇಟ್ ಬಸಪ್ಪ,
ವಯಸ್ಸು ಸುಮಾರು 68 ವರ್ಷ,

10. ಶ್ರೀ ಹೇಮನಗೌಡ ಲಕ್ಕನಗೌಡರ ತಂದೆ ಲೇಟ್ ಬಸಪ್ಪ,
ವಯಸ್ಸು ಸುಮಾರು 66 ವರ್ಷ,

11. ಶ್ರೀ ಮಹೇಶಗೌಡ ಲಕ್ಕನಗೌಡರ ತಂದೆ ಲೇಟ್ ಬಸಪ್ಪ,
ವಯಸ್ಸು ಸುಮಾರು 64 ವರ್ಷ,

12. ಶ್ರೀ ಕರೆಗೌಡ ಲಕ್ಕನಗೌಡರ ತಂದೆ ಲೇಟ್ ಬಸಪ್ಪ,
ವಯಸ್ಸು ಸುಮಾರು 60 ವರ್ಷ,

13. ಶ್ರೀ ಶೇಖರಗೌಡ ಲಕ್ಕನಗೌಡರ ತಂದೆ ಲೇಟ್ ಬಸಪ್ಪ,
ವಯಸ್ಸು ಸುಮಾರು 48 ವರ್ಷ,

1, 3, 5,6, 9 ರಿಂದ 13 ನೇ ಎದುರುದಾರರ ವಾಸ :
ಕಡೂರ ಗ್ರಾಮ, ತಾಃ ರಟ್ಟಿಹಳ್ಳಿ (ಹಳೇ ಹಿರೇಕೆರೂರ),
ಜಿಃ ಹಾವೇರಿ.

(1 ಮತ್ತು 2 ನೇ ಎದುರುದಾರರ ಪರ ವಕೀಲರು : ಶ್ರೀ ಪಿ.ಹೆಚ್.ಪಾಟೀಲ)
(3 ರಿಂದ 8 ನೇ ಎದುರುದಾರರ ಪರ ವಕೀಲರು: ಶ್ರೀ ಎಸ್.ಆರ್.ಲಿಂಗಾಪುರ)
(9 ನೇ ಎದುರುದಾರನ ವಿರುದ್ಧ ಮೇಲ್ಮನವಿ ವಜಾ ಆಗಿರುತ್ತದೆ)
(10 ರಿಂದ 13 ನೇ ಎದುರುದಾರರ ಸ್ಥಾನದಲ್ಲಿ ಏಕತರ್ಫಿ)

-:oOo:-

## -:: ಮಧ್ಯಂತರ ಅರ್ಜಿ ಸಂಖ್ಯೆ-6 ರ ಮೇಲೆ ಆದೇಶ ::-

ಮೇಲ್ಮನವಿದಾರನು ಈ ಮಧ್ಯಂತರ ಅರ್ಜಿ ಸಂಖ್ಯೆ-6 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 16 ನಿಯಮ 6 ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ,

ಹಿರೇಕೆರೂರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿರುವಂತಹ ದತ್ತಕ ಪತ್ರ ದಸ್ತವೇಜು ಸಂಖ್ಯೆಃ 16/1962-63ರ ದೃಢೀಕೃತ ನಕಲನ್ನು ಹಾಜರಪಡಿಸಲು ಹಿರೇಕೆರೂರ ಉಪನೋಂದಣಾಧಿಕಾರಿಗಳಿಗೆ ಸಮನ್ಸನ್ನು ಕಳುಹಿಸಬೇಕೆಂದು ಕೋರಿರುತ್ತಾನೆ.

2. ಈ ಮಧ್ಯಂತರ ಅರ್ಜಿಯನ್ನು ಮೇಲ್ಮನವಿದಾರನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

3. 1 ಮತ್ತು 2ನೇ ಎದುರುದಾರರು ಮಾತ್ರ ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರುಗಳನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಮೇಲ್ಮನವಿದಾರನ ಮತ್ತು ಎದುರುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರ/ಮೇಲ್ಮನವಿದಾರನು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾನೆಯೇ?

ಅಂಶ- 2- ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ನಕರಾತ್ಮಕವಾಗಿ ಮತ್ತು

ಅಂಶ-2 - ಅಂತಿಮ ಆದೇಶದಂತೆಃ

## ಕಾರಣಗಳು

7. ಅಂಶ-1:- ಅರ್ಜಿದಾರ/ ಮೇಲ್ಮನವಿದಾರನು, ಹಿರೇಕೆರೂರ ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ಮೂಲ ದಾವೆ ಸಂಖ್ಯೆಃ 100/2016 ರಲ್ಲಿ ದಿನಾಂಕ 04-08-2017 ರಂದು ಆದಂತಹ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆ ಹಾಗೂ ಮೇಲ್ಮನವಿಯನ್ನು ಸಲ್ಲಿಸುವಾಗ ಕಾಲ ವಿಳಂಬವಾಗಿದೆ ಎಂದು ಸದರಿ ಕಾಲ ವಿಳಂಬವನ್ನು ಮನ್ನಿಸುವ ಸಲುವಾಗಿ, ಕಾಲ ಪರಿಮಿತಿ ಅಧಿನಿಯಮದ ಕಲಂ 5ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ -2 ನ್ನು ಸಲ್ಲಿಸಿರುತ್ತಾನೆ ಹಾಗೂ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಹಿರೇಕೆರೂರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 06-08-1962 ರಂದು ನೋಂದಣಿಯಾದಂತಹ ನೋಂದಾಯಿತ ದತ್ತಕ ಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಲು ಸಮನ್ಸನ್ನು ಕಳುಹಿಸಬೇಕೆಂದು ಕೋರಿರುತ್ತಾನೆ.

8. ಮೇಲ್ಮನವಿದಾರನ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಮೃತ ಸಿದ್ದನಗೌಡ ಇವನು ಚಂದ್ರಶೇಖರಗೌಡ ಅಂದರೆ 5ನೇ ಎದುರುದಾರನ ಪರ ನೋಂದಾಯಿತ ದತ್ತಕ ಪತ್ರವನ್ನು ಬರೆದುಕೊಟ್ಟಿದ್ದು, ಅದು ಹಿರೇಕೆರೂರು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿದ್ದು, ಈ ಮೇಲ್ಮನವಿಯನ್ನು ಸಲ್ಲಿಸಲು ಆಗಿರುವಂತಹ ಕಾಲ ವಿಳಂಬವನ್ನು ಮನ್ನಿಸಲು ಇರುವಂತಹ ಕಾರಣಗಳನ್ನು ಸಾಬೀತು ಪಡಿಸಲು ಸದರಿ ನೋಂದಾಯಿತ ದತ್ತಕ ಪತ್ರದ ದೃಢೀಕೃತ ನಕಲು ಅವಶ್ಯವಾಗಿರುವಂತಹ ದಾಖಲೆಯಾಗಿರುತ್ತದೆ ಹಾಗೂ ಮೇಲ್ಮನವಿದಾರನು ಬಹಳ ಉತ್ತಮವಾದ ಕೇಸನ್ನು ಹೊಂದಿರುತ್ತಾನೆ. ಆದ್ದರಿಂದ, ಸದರಿ ದತ್ತಕ ಪತ್ರದ ದೃಢೀಕೃತ

ನಕಲನ್ನು ಹಾಜರಪಡಿಸಲು ಹಿರೇಕೆರೂರ ಉಪನೊಂದಣಾಧಿಕಾರಿಗಳಿಗೆ ಸಮನ್ಸನ್ನು ಕಳುಹಿಸುವುದು ಅವಶ್ಯವಾಗಿರುತ್ತದೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

9. 1 ಮತ್ತು 2ನೇ ಎದುರುದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಮೇಲ್ಮನವಿದಾರನು ಮೂಲ ದಾವೆ ಸಂಖ್ಯೆಃ 100/2016ರಲ್ಲಿ ಆದಂತಹ ತೀರ್ಪು ಮತ್ತು ಡಿಕ್ರಿಯನು ಪ್ರಶ್ನಿಸಿ 3 ವರ್ಷ 3 ತಿಂಗಳು 28 ದಿನಗಳು ಕಾಲ ವಿಳಂಬದ ನಂತರ ಮೇಲ್ಮನವಿಯನ್ನು ಸಲ್ಲಿಸಿದ್ದು, ಈಗ ಕಾಲ ವಿಳಂಬದ ಬಗ್ಗೆ ಸಾಕ್ಷಿ ವಿಚಾರಣೆ ಇದ್ದು, ಮೇಲ್ಮನವಿದಾರನು ಕೇಳಿದಂತಹ ದತ್ತಕ ಪತ್ರಕ್ಕೂ, ಮೇಲ್ಮನವಿದಾರನಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ, ಕೇವಲ ಕಾಲ ವಿಳಂಬವನ್ನು ಮಾಡುವ ದುರುದ್ದೇಶದಿಂದ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾನೆ, ದತ್ತಕ ಪತ್ರವು ಕಾಲ ವಿಳಂಬವನ್ನು ಮನ್ನಿಸಲು ಇರುವ ಕಾರಣಗಳನ್ನು ತೋರಿಸವ ಅವಶ್ಯಕವಾದ ದಾಖಲೆ ಅಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

10. ಮೇಲ್ಮನವಿದಾರನು ಮೇಲ್ಮನವಿಯೊಂದಿಗೆ ಹಾಜರುಪಡಿಸುವಂತಹ ದಾಖಲೆಗಳನ್ನು ಅವಲೋಕಿಸಲಾಗಿ, ಹಿರೇಕೆರೂರ ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಈ ಮೇಲ್ಮನವಿಯ 1 ಮತ್ತು 2ನೇ ಎದುರುದಾರರು ಸಲ್ಲಿಸಿದಂತಹ ಮೂಲ ದಾವೆ ಸಂಖ್ಯೆಃ 100/2016 ದಿನಾಂಕ 04-08-2017ರಂದು ಭಾಗಶಃ ಡಿಕ್ರಿಯಾಗಿರುವುದು ಸದರಿ ಮೂಲ ದಾವೆ ಸಂಖ್ಯೆಃ100/2016ರ ತೀರ್ಪಿನ ದೃಢೀಕೃತ ನಕಲಿನಿಂದ ಕಂಡು ಬರುತ್ತದೆ ಹಾಗೂ ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಮೇಲ್ಮನವಿದಾರನು ಮೇಲ್ಮನವಿಯನ್ನು ದಿನಾಂಕ 02-12-2020 ರಂದು ಸಲ್ಲಿಸಿದ್ದು, ಆದರೆ ಈ ಮೇಲ್ಮನವಿಯನ್ನು ಸಲ್ಲಿಸಲು ಕಾಲ ವಿಳಂಬವಾಗಿರುವುದರಿಂದ, ಮಧ್ಯಂತರ ಅರ್ಜಿ ಸಂಖ್ಯೆ-2ನ್ನು ಕಾಲ ಪರಿಮಿತಿ ಅಧಿನಿಯಮ ಕಲಂ 5ರ ಅಡಿಯಲ್ಲಿ ಸಲ್ಲಿಸಿದ್ದು, ಸದರಿ

ಮಧ್ಯಂತರ ಅರ್ಜಿಯ ಮೇಲೆ ಸಾಕ್ಷಿ ವಿಚಾರಣೆ ಪ್ರಾರಂಭಗೊಂಡಿದ್ದು, ಮೇಲ್ಮನವಿದಾರನು ತಾನು ಪಿಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ತನ್ನ ಮುಂದುವರೆದ ಮುಖ್ಯ ವಿಚಾರಣೆಗೆಂದು ಕಾಲವಕಾಶ ತೆಗೆದುಕೊಂಡ ನಂತರ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ, ಮೃತ ಸಿದ್ದನಗೌಡ ಇವನು ಚಂದ್ರಶೇಖರಗೌಡ ಅಂದರೆ 5ನೇ ಎದುರುದಾರನ ಪರ ಬರೆದುಕೊಟ್ಟಂತಹ ದಿನಾಂಕ 06-08-1962 ರಂದು ನೋಂದಾಯಿತ ದತ್ತಕ ಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಲು ಹಿರೇಕೆರೂರ ಉಪನೊಂದಣಾಧಿಕಾರಿಗಳಿಗೆ ಸಮನ್ಸನ್ನು ಕಳುಹಿಸಬೇಕೆಂದು ಕೋರಿರುತ್ತಾನೆ, ಆದರೆ ಈಗ ಕೇವಲ ಮೇಲ್ಮನವಿಯನ್ನು ಸಲ್ಲಿಸಲು ಆಗಿರುವಂತಹ ಕಾಲ ವಿಳಂಬವನ್ನು ಮನ್ನಿಸಲು ಇರುವಂತಹ ಕಾರಣಗಳನ್ನು ಮೇಲ್ಮನವಿದಾರನು ಸಾಬೀತು ಪಡಿಸಲು ಮಾತ್ರ ಸಾಕ್ಷಿ ವಿಚಾರಣೆ ಇರುತ್ತದೆ. ಅಲ್ಲದೇ, ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ, ಮೇಲ್ಮನವಿದಾರನು ಸದರಿ ದಾಖಲೆಯು ಈ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ಅವಶ್ಯಕವಾದಂತಹ ದಾಖಲೆಯೆಂದು ಹೇಳಿರುತ್ತಾನೆ, ಆದರೆ, ಮೇಲ್ಮನವಿಯನ್ನು ಸಲ್ಲಿಸಲು ಆಗಿರುವಂತಹ ಕಾಲ ವಿಳಂಬವನ್ನು ಮನ್ನಿಸಲು ಸದರಿ ದಾಖಲೆ ಯಾವ ರೀತಿ ಅವಶ್ಯ ಇದೆ ಹಾಗೂ ಸದರಿ ದಾಖಲೆಗೂ ಕಾಲ ವಿಳಂಬಕ್ಕೂ ಯಾವ ರೀತಿ ಸಂಬಂಧ ಇದೆ ಎಂದು ತನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಹಾಗೂ ಈ ಮಧ್ಯಂತರ ಅರ್ಜಿ ಸಂಖ್ಯೆ-2ರ ಮೇಲೆ ಸಾಕ್ಷಿ ವಿಚಾರಣೆ ಇರುವುದರಿಂದ ಮತ್ತು ಸದರಿ ಸಾಕ್ಷಿ ವಿಚಾರಣೆ ಕೇವಲ ಕಾಲ ವಿಳಂಬವನ್ನು ಮನ್ನಿಸುವ ಸಲುವಾಗಿ ಇರುವಂತಹ ಸಾಕ್ಷಿ ವಿಚಾರಣೆಯಾಗಿರುವುದರಿಂದ ಹಾಗೂ ದಿನಾಂಕ 06-08-1962 ರಂದು ನೋಂದಣಿಯಾದಂತಹ ನೋಂದಾಯಿತ ದತ್ತಕ ಪತ್ರವು ಕಾಲ ವಿಳಂಬವನ್ನು ಮನ್ನಿಸಲು ಯಾವ ರೀತಿ ಅವಶ್ಯಕ ದಾಖಲೆಯೆಂದು ಮೇಲ್ಮನವಿದಾರನು ಹೇಳದೇ ಇರುವುದರಿಂದ ಮತ್ತು ಕೇವಲ ಕಾಲ ವಿಳಂಬವನ್ನು ಮನ್ನಿಸುವ ಸಲುವಾಗಿ ಸಾಕ್ಷಿ ವಿಚಾರಣೆ ಇರುವುದರಿಂದ, ಸದರಿ ದಾಖಲೆಯನ್ನು ಹಾಜರಪಡಿಸುವ ಸಲುವಾಗಿ, ಹಿರೇಕೆರೂರ

ಉಪನೋಂದಣಾಧಿಕಾರಿಗಳಿಗೆ ಸಮನ್ಸನ್ನು ಕಳುಹಿಸುವ ಅವಶ್ಯಕತೆ ಇರುವುದಿಲ್ಲ ಹಾಗೂ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ, ಮೇಲ್ಮನವಿದಾರನಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಅಲ್ಲದೇ, ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದಲೂ ಸಹ, ಈ ಮಧ್ಯಂತರ ಅರ್ಜಿ ಪುರಸ್ಕರಿಸುವಂತಹದ್ದು ಅಲ್ಲ. ಅಲ್ಲದೇ, ಮೇಲ್ಮನವಿದಾರನು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ತೋರಿಸಿರುವುದಿಲ್ಲ. ಆದ್ದರಿಂದ, ಅಂಶ-1ನ್ನು ನಕರಾತ್ಮಕವಾಗಿ ಉತ್ತರಿಸಿದ್ದೇನೆ.

11. ಅಂಶ-2 – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಮೇಲ್ಮನವಿದಾರನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 16 ನಿಯಮ 6 ಹಾಗೂ ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ-6ನ್ನು 100/- ರೂ.ಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 24ನೇ ಆಗಸ್ಟ 2021 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-
(ವೈ. ಕೆ. ಬೇನಾಳ),
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹಿರೇಕೆರೂರ.